# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನ ಸಂಸ್ಥೆ**

'ವಿಜ್ಞಾನ ಭವನ', ನಂ.24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

ದೂರವಾಣಿ : 080–26718939 ಇ–ಮೇಲ್ : krvp.info@gmail.com ವೆಬ್‌ಸೈಟ್ : www.krvp.in

## –:ಪ್ರಕಟಣೆ:–

ಈ ಮೂಲಕ ಮಾನ್ಯ ಕರಾವಿಪ ಸದಸ್ಯರಿಗೆ ವಿನಂತಿಸಿಕೊಳ್ಳುವುದೇನೆಂದರೆ ಈಗಾಗಲೇ ಪ್ರಕಟಿಸಿರುವ ಕರಡು ಮತದಾರರ ಪಟ್ಟಿಗೆ ಸದಸ್ಯರಿಂದ ಸದಸ್ಯತ್ವದ ಬಗ್ಗೆ ಹಾಗೂ ಕೇರಾಫ್ ವಿಳಾಸಗಳ ಬಗ್ಗೆ ಆಕ್ಷೇಪಣೆಗಳು ವ್ಯಕ್ತವಾಗಿದ್ದು, ಹಾಗೂ ಸಂಘದ ಕಲಂ 25ರ ವಿಚಾರಣಾ ವರದಿಯು ಸಲ್ಲಿಕೆಯಾಗಿರುತ್ತದೆ.

ಸಂಘದ ಮತದಾರರ ಪಟ್ಟಿಯನ್ನು ಕಲಂ 25 ರ ವಿಚಾರಣಾ ವರದಿಯಲ್ಲಿನ ಅಂಶಗಳನ್ನು ಪರಿಗಣಿಸಿ, ನ್ಯೂನತೆಗಳನ್ನು ಸರಿಪಡಿಸಿ ಚುನಾವಣೆ ಜರುಗಿಸುವುದು ಸೂಕ್ತವಾಗಿರುತ್ತದೆ ಎಂದು ಜಿಲ್ಲಾ ನೋಂದಣಾಧಿಕಾರಿ, 3ನೇ ವಲಯ, ಬೆಂಗಳೂರು ರವರು ಸೂಚಿಸಿರುತ್ತಾರೆ. ಹಾಗೂ ಸಂಘದ ಬೈಲಾ ಕಂಡಿಕೆ ಸಂಖ್ಯೆ 2 ರಲ್ಲಿ ವಿವರಿಸಿರುವಂತೆ ಸಂಘದಲ್ಲಿ ಸದಸ್ಯತ್ವಕ್ಕೆ ಸಂಬಂಧಿಸಿದ ದಾಖಲಾತಿಗಳು ಅಪೂರ್ಣವಾಗಿರುತ್ತವೆ. ಹಾಗಾಗಿ ಈ ಸಂಬಂಧ ಕರಡು ಮತದಾರರ ಪಟ್ಟಿಯಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಲು ಸಂಘದ ಈ ಕೆಳಕಂಡ ದಾಖಲೆಗಳನ್ನು ದಿನಾಂಕ 12.04.2025ರ ಒಳಗಾಗಿ ಸರ್ಕಾರಿ ರಜೆ, ಸಾರ್ವತ್ರಿಕ ರಜೆಗಳನ್ನು ಹೊರತುಪಡಿಸಿ (ಸಮಯ : ಬೆಳಗ್ಗೆ 10.00 ರಿಂದ ಸಂಜೆ 5.00 ರವರೆಗೆ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕೇಂದ್ರ ಕಚೇರಿ, ವಿಜ್ಞಾನ ಭವನ, ನಂ.24/2, 21ನೇ ಮುಖ್ಯರಸ್ತೆ, ಬೆಂಗಳೂರು ಇಲ್ಲಿಗೆ ಖುದ್ದಾಗಿ ಹಾಜರಾಗಿ ನೀಡಲು ಈ ಮೂಲಕ ಕೋರಿದೆ ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

1) ಹೆಸರು, ವಿಳಾಸ ಮತ್ತು ಸಂಪರ್ಕ ಸಂಖ್ಯೆ.

2) ವೆಬ್‌ಸೈಟ್‌ನಲ್ಲಿ ಇರುವ ಕರಡು ಮತದಾರರ ಪಟ್ಟಿಯಲ್ಲಿ ತಮ್ಮ ಕ್ರಮ ಸಂಖ್ಯೆ.

3) ಕರಾವಿಪ ಸದಸ್ಯತ್ವ ಹೊಂದಲು ವಾಸಸ್ಥಾನದ ಬಗ್ಗೆ ಯಾವುದಾದರೊಂದು ಪುರಾವೆ ಇರತಕ್ಕದ್ದು.

   ಉದಾ : ವೋಟರ್ಸ್ / ಐಡಿ ಕಾರ್ಡ್ / ಆಧಾರ್ ಕಾರ್ಡ್ / ಪಡಿತರ ಚೀಟಿ / ಡ್ರೈವಿಂಗ್ ಲೈಸೆನ್ಸ್ / ವಾಸಸ್ಥಳದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಇತ್ಯಾದಿ.

4) ಸಾಂಸ್ಥಿಕ ಸದಸ್ಯತ್ವ ಬಯಸುವ ಖಾಸಗಿ ಸಂಸ್ಥೆಗಳು ಮೂಲ ನೋಂದಣಿ ಹಾಗೂ ಪ್ರಸ್ತುತ ವರ್ಷದ ನವೀಕರಣ ಪತ್ರಗಳ ದೃಢೀಕೃತ ಜೆರಾಕ್ಸ್ ಪ್ರತಿ ಸಲ್ಲಿಸುವುದು. (ಸರ್ಕಾರಿ ಶಾಲಾ ಕಾಲೇಜುಗಳಿಗೆ ಇದು ಅನ್ವಯಿಸುವುದಿಲ್ಲ). ವರ್ಗಾವಣೆಗೆ ಒಳಪಟ್ಟ ನೌಕರರು ವರ್ಗಾವಣೆ ಆದೇಶದ ಪ್ರತಿ ಸಲ್ಲಿಸುವುದು.

5) ಪಾಸ್ ಪೋರ್ಟ್ ಅಳತೆಯ 2 ಫೋಟೋಗಳು.

ದಿನಾಂಕ : 22-02-2025
ಸ್ಥಳ : ಬೆಂಗಳೂರು

ಆಡಳಿತಾಧಿಕಾರಿ
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು